# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1277 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್ ಅಪ್ಪಾಜಿಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 30.09.2020 |
| ಉತ್ತರಿಸುವ ಸಚಿವರು | ವಸತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ಗೃಹ ಮಂಡಳಿ ವತಿಯಿಂದ ಮಂಡ್ಯ ಕೆರೆ ಅಂಗಳದಲ್ಲಿ ಮಂಡ್ಯ ಗ್ರಾಮದ ಸರ್ವೆ ನಂ.507 ರಲ್ಲಿ ವಸತಿ ಬಡಾವಣೆಯನ್ನು ಯಾವಾಗ ಅಭಿವೃದ್ಧಿ ಪಡಿಸಲಾಗಿದೆ. | ಕರ್ನಾಟಕ ಗೃಹ ಮಂಡಳಿಯಿಂದ ಮಂಡ್ಯ ನಗರದ ಸರ್ವೆ ನಂ. 507ರಲ್ಲಿ 120 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಬಡಾವಣೆಯನ್ನು 2003-2004ನೇ ಸಾಲಿನಲ್ಲಿ ಅಭಿವೃದ್ಧಿ ಪಡಿಸಲಾಗಿದೆ. |
| ಆ | ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಹಾಗೂ ಯಾವಾಗ: (ವಿವರ ನೀಡುವುದು) | ಮಂಡ್ಯ ನಗರದ ಸರ್ವೆ ನಂ. 507 ರಲ್ಲಿಯ ಬಡಾವಣೆಯಲ್ಲಿ ಒಟ್ಟು 1240 ನಿವೇಶನಗಳನ್ನು ಇದುವರೆಗೆ ಹಂಚಿಕೆ ಮಾಡಲಾಗಿದ್ದು ವರ್ಷಾವಾರು ಹಂಚಿಕೆ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಇ | ಸದರಿ ಬಡಾವಣೆಯನ್ನು ಮಂಡ್ಯ ನಗರ ಸಭೆಗೆ ಹಸ್ತಾಂತರ ಮಾಡಲಾಗಿದೆಯೇ: (ವಿವರ ನೀಡುವುದು) | ಸದರಿ ಬಡಾವಣೆಯನ್ನು ಮುಂದಿನ ನಿರ್ವಹಣೆಗೆ ದಿನಾಂಕ: 15.10.2019 ರಂದು ಮಂಡ್ಯ ನಗರ ಸಭೆಗೆ ಹಸ್ತಾಂತರ ಮಾಡಲಾಗಿದೆ. ಬಡಾವಣೆ ಹಸ್ತಾಂತರ ಪತ್ರದ ಪ್ರತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |
| ಈ | ಮಂಡ್ಯ ನಗರಸಭೆಯವರು ಈ ಬಡಾವಣೆಗೆ ಸಂಬಂಧಿಸಿದಂತೆ ಕೆ.ಹೆಚ್.ಬಿ ರವರಿಂದ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಬರಬೇಕಾದ 77 ಲಕ್ಷ ಶುಲ್ಕ ಬಂದ ನಂತರ ಹಸ್ತಾಂತರ ಮಾಡಿಕೊಳ್ಳುವುದಾಗಿ ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| ಉ | ಬಂದಿದ್ದಲ್ಲಿ ಈ ಶುಲ್ಕವನ್ನು ಕೆ.ಹೆಚ್.ಬಿ. ಯಿಂದ ಪಾವತಿಸಿ ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ರೂ.77,69,856/- ಮೊತ್ತವನ್ನು ಪಾವತಿಸುವಂತೆ ಕರ್ನಾಟಕ ಗೃಹ ಮಂಡಳಿಗೆ ಸೂಚಿಸಲಾಗಿದೆ. |

ವಇ 138 ಕಗೃಮಂ 2020

(ವಿ. ಸೋಮಣ್ಣ)
ವಸತಿ ಸಚಿವರು.

[illegible] (ಅನುಬಂಧ-1) 6
[illegible] ಸಂಖ್ಯೆ 1277ಕ್ಕೆ [illegible] ಅನುಬಂಧ-1

19

| Name Of the Layout : Mandya Chickmandya Sy No 507 | | |
|---|---|---|
| **YEAR WISE ALLOTTED SITES ABSTRACT**<br>**AS ON 18-09-2020** | | |
| **SL NO** | **YEAR OF ALLOTMENT** | **ALLOTTED SITES** |
| 1 | 2003 | 69 |
| 2 | 2004 | 326 |
| 3 | 2005 | 475 |
| 4 | 2006 | 154 |
| 5 | 2007 | 42 |
| 6 | 2012 | 14 |
| 7 | 2013 | 23 |
| 8 | 2014 | 13 |
| 9 | 2015 | 35 |
| 10 | 2016 | 9 |
| 11 | 2017 | 10 |
| 12 | 2018 | 12 |
| 13 | 2020 | 58 |
| | **Total** | **1240** |

ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾ.ಸೇ.)
ಕರ್ನಾಟಕ ಗೃಹ ಮಂಡಳಿ
ಬೆಂಗಳೂರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಎನ್. ಅಪ್ಪಾಜಿಗೌಡ (ಅನುಬಂಧ - 2) (5)
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1277 ಕ್ಕೆ ಉತ್ತರದ ಅನುಬಂಧ - 2


**ಕರ್ನಾಟಕ ಗೃಹ ಮಂಡಳಿ**

ಜಿಲ್ಲಾ ಯೋಜನಾ ಕಛೇರಿ,
100 ಅಡಿ ರಸ್ತೆ, ಬನ್ನೂರು ರಸ್ತೆ,
ಮಂಡ್ಯ.-571401.


ಕರ್ನಾಟಕ ಗೃಹ ಮಂಡಳಿ

ಸಂಖ್ಯೆ/ಕ.ಗೃ.ಮಂ/ಸ.ಕಾ.ಅ/ಉ.ವಿ/ಬಡಾವಣೆ ಹಸ್ತಾಂತರ/2019-20/291 ದಿನಾಂಕ: 15/10/2019

## ಕರ್ನಾಟಕ ಗೃಹ ಮಂಡಳಿ ಚಿಕ್ಕಮಂಡ್ಯ ಬಡಾವಣೆ ಹಸ್ತಾಂತರ ಪತ್ರ

ವಿಷಯ :- ಕರ್ನಾಟಕ ಗೃಹ ಮಂಡಳಿ, ಮಂಡ್ಯ ನಗರದ ಸರ್ವೆ ನಂ.507 ರಲ್ಲಿ 120 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸಿರುವ ವಸತಿ ಬಡಾವಣೆಯನ್ನು ಮುಂದಿನ ನಿರ್ವಹಣೆಗಾಗಿ ಮಂಡ್ಯ ನಗರ ಸಭೆಗೆ ಹಸ್ತಾಂತರಿಸುವ ಬಗ್ಗೆ.

ಉಲ್ಲೇಖ:- 1. ಮಾನ್ಯ ಆಡಳಿತಾಧಿಕಾರಿಗಳು ಅಧ್ಯಕ್ಷತೆ ಸಭೆಯ ನಡವಳಿ ಸಭೆ ಸಂಖ್ಯೆ – 02 ವಿಷಯ ಸಂಖ್ಯೆ 22 ದಿನಾಂಕ 25/02/2019.
2. ಪೌರಾಯುಕ್ತರು ನಗರ ಸಭೆ ಮಂಡ್ಯರವರ ಪತ್ರ ಸಂಖ್ಯೆ ನ.ಸ.ಮಂ/ಕಾ.ವಿ/ಸಿ.ಆರ್/ಕೆ.ಹೆಚ್.ಬಿ–01/2018–19 ದಿ: 20/06/19.

* * * *

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಕರ್ನಾಟಕ ಗೃಹ ಮಂಡಳಿಯಿಂದ ಮಂಡ್ಯ ನಗರದ ಸರ್ವೆ ನಂ.507 ರಲ್ಲಿ 120 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ಅಂದರೆ ಕುಡಿಯುವ ನೀರಿನ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ, ವಿದ್ಯುತ್ ಸಂಪರ್ಕದ ವ್ಯವಸ್ಥೆ, ರಸ್ತೆ ಹಾಗೂ ರಸ್ತೆ ಬದಿ ಚರಂಡಿ ವ್ಯವಸ್ಥೆ, ಉದ್ಯಾನವನಗಳ ವ್ಯವಸ್ಥೆ ಒಳಗೊಂಡಂತೆ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲಾಗಿದೆ. ಬಡಾವಣೆಯ ಕುಡಿಯುವ ನೀರು ಸರಬರಾಜು ವ್ಯವಸ್ಥೆಗೆ 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಟ್ಯಾಂಕ್ (OHT) ಹಾಗೂ 10.00 ಲಕ್ಷ ಲೀಟರ್ ಸಾಮರ್ಥ್ಯದ ನೆಲಮಟ್ಟದ ಟ್ಯಾಂಕ್ (Sump) ನಿರ್ಮಿಸಲಾಗಿದೆ. ಬಡಾವಣೆಯಲ್ಲಿ ಒಟ್ಟು 1427 ವಸತಿ ನಿವೇಶನಗಳು, 18 ಮನೆಗಳು, 16 ಸಿ.ಎ.ನಿವೇಶನಗಳು ಮತ್ತು 10 ವಾಣಿಜ್ಯ ನಿವೇಶನಗಳು, ಸೇರಿದಂತೆ ಒಟ್ಟು 1471 ಸ್ವತ್ತುಗಳನ್ನು ನಿವೇಶನ/ಮನೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ.

ಈ ಬಡಾವಣೆಗೆ ಕಾವೇರಿ ನೀರು ಸರಬರಾಜು ಮಾಡುವ ಸಂಬಂಧ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡ್ಯ ಇವರಿಗೆ ನೀರು ಸರಬರಾಜು ಯೋಜನೆಯ ಅಪೋರ್ಷನೇಟ್ ವೆಚ್ಚ ರೂ. 93.59 ಲಕ್ಷಗಳನ್ನು ಹಾಗೂ ಕಾವೇರಿ ನೀರಿನ ಸಂಪರ್ಕ ಕಲ್ಪಿಸುವ ಲಿಂಕಿಂಗ್ ಕಾಮಗಾರಿಗೆ 16.35 ಲಕ್ಷ ಒಟ್ಟು ರೂ. 1,09,94,000/– (ಒಂದು ಕೋಟಿ ಒಂಭತ್ತು ಲಕ್ಷದ ತೊಂಬತ್ತ ನಾಲ್ಕು ಸಾವಿರ ರೂಗಳು) ಗಳನ್ನು ಪಾವತಿಸಲಾಗಿದೆ.

ಇದಲ್ಲದೆ ಸದರಿ ಬಡಾವಣೆಯ ಒಳಚರಂಡಿ Final Disposal ವ್ಯವಸ್ಥೆಗಾಗಿ (Wet well & Out Fall Sewer) ಕಾಮಗಾರಿಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡ್ಯ ಇವರಿಗೆ ಸಂಬಂಧಿಸಿದಂತೆ ರೂ.72.00 ಲಕ್ಷಗಳು ಹಾಗೂ ರೂ.17.50 ಲಕ್ಷಗಳು ಒಟ್ಟು ರೂ. 89,50,000/– (ಎಂಬತ್ತೊಂಬತ್ತು ಲಕ್ಷದ ಐವತ್ತು ಸಾವಿರಗಳು) ಗಳನ್ನು ಪಾವತಿಸಲಾಗಿದೆ.

ಸದರಿ ಬಡಾವಣೆಯನ್ನು ಮುಂದಿನ ನಿರ್ವಹಣೆಗೆ ಮಂಡ್ಯ ನಗರ ಸಭೆಗೆ ಹಸ್ತಾಂತರಿಸಿ ಕೊಳ್ಳುವಂತೆ ಕರ್ನಾಟಕ ಗೃಹ ಮಂಡಳಿಯು ಮನವಿಯ ಮಾಡಿದ ಮೇರೆಗೆ ದಿನಾಂಕ: 25/02/2019 ರಂದು ಮಾನ್ಯ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಮಂಡ್ಯ ನಗರ ಸಭೆ ಸಾಮಾನ್ಯ ಸಭೆಯಲ್ಲಿ ಬಡಾವಣೆಯನ್ನು ಹಸ್ತಾಂತರಿಸಿಕೊಳ್ಳಲು ತಿರ್ಮಾನಿಸಲಾಗಿದ್ದು, ಸದರಿ ಬಡಾವಣೆಯ ಮೂಲಭೂತ ಸೌಕರ್ಯಗಳ ದುರಸ್ತಿ ಹಾಗೂ ಪುನರುಜ್ಜೀವನ ಕಾಮಗಾರಿಗಳು ಮತ್ತು ಕುಡಿಯುವ ನೀರಿನ ವ್ಯವಸ್ಥೆ, ಬೀದಿ ದೀಪಗಳ ಹಾಗೂ

Scanned by CamScanner

ರಸ್ತೆ ಮತ್ತು ಚರಂಡಿ, ಒಳಚರಂಡಿಗಳ ನಿರ್ವಹಣೆಗಾಗಿ ರೂ. 550.00 ಲಕ್ಷಗಳನ್ನು ಪೌರಾಯುಕ್ತರು, ನಗರ ಸಭೆ ಮಂಡ್ಯ ರವರ ಹೆಸರಿಗೆ ಠೇವಣಿಸುವಂತೆ ಉಲ್ಲೇಖಿತ ಪತ್ರದಲ್ಲಿ ಪೌರಾಯುಕ್ತರು ನಗರ ಸಭೆ ಮಂಡ್ಯರವರು ತಿಳಿಸಿರುತ್ತಾರೆ. ಅದರಂತೆ ರೂ. 550.00 ಲಕ್ಷಗಳನ್ನು ಪೌರಾಯುಕ್ತರು ನಗರ ಸಭೆ, ಮಂಡ್ಯ ರವರ ಹೆಸರಿಗೆ ಕಾರ್ಪೋರೇಷನ್ ಬ್ಯಾಂಕ್ ಚೆಕ್‌ನಂ. 961259 ದಿನಾಂಕ:15-10-2019 ರ ಮುಖಾಂತರ ಪಾವತಿಸಲಾಗಿದೆ.

ಉಲ್ಲೇಖಿತ ಪತ್ರ (2) ರಲ್ಲಿ ತಿಳಿಸಿರುವಂತೆ ಕರ್ನಾಟಕ ಗೃಹ ಮಂಡಳಿಯ ಸದರಿ ಬಡಾವಣೆಯನ್ನು ಮುಂದಿನ ನಿರ್ವಹಣೆಗಾಗಿ ದಿನಾಂಕ: 15-10-2019 ರಂದು ನಗರ ಸಭೆ ಮಂಡ್ಯ ಇವರಿಗೆ ಹಸ್ತಾಂತರಿಸಿದೆ ಹಾಗೂ ಬಡಾವಣೆಯಲ್ಲಿನ ಉದ್ಯಾನವನಗಳನ್ನು ನಗರ ಸಭೆಗೆ ಹಸ್ತಾಂತರಿಸಲಾಗಿದೆ. ಮುಂದುವರೆದು ಸದರಿ ಬಡಾವಣೆಯಲ್ಲಿ ಇರುವ ಕರ್ನಾಟಕ ಗೃಹ ಮಂಡಳಿಗೆ ಸೇರಿದ ಆಸ್ತಿಗಳು ಕರ್ನಾಟಕ ಗೃಹ ಮಂಡಳಿ ಒಡೆತನದಲ್ಲೆ ಮುಂದುವರೆಯುತ್ತದೆ. (ಹಂಚಿಕೆದಾರರ ಪಟ್ಟಿಯಲ್ಲಿ ನಮೂದಿಸಿರುವಂತೆ.)

<u>ಟಿಪ್ಪಣಿ:-</u>

| | |
|---|---|
| ನಿವೇಶನಗಳು | 1427 |
| ಮನೆಗಳು | 18 |
| ಸಿ.ಎ.ನಿವೇಶನಗಳು | 16 |
| ವಾಣಿಜ್ಯ ನಿವೇಶನಗಳು | 10 |
| ಅಭಿವೃದ್ಧಿಪಡಿಸದ ನಿವೇಶನ ಸಂಖ್ಯೆ 309, 1416, 1419, 1426, 1403 ರಿಂದ 1413, 1431 ರಿಂದ 1449. | 34 |
| ಒಟ್ಟು ಸ್ವತ್ತುಗಳು | 1505 |

<u>ಹಸ್ತಾಂತರಿಸಿದ ದಾಖಲೆಗಳು:-</u>

1. ಬಡಾವಣೆಯ ನಕ್ಷೆಗಳು - 02.
2. ಹಂಚಿಕೆದಾರರ ವಿವರಗಳು.
3. ಬಡಾವಣೆಯ ಉದ್ಯಾನವನಗಳು.
4. ಕ.ನ.ನೀ.ಸ ಮತ್ತು ಒ.ಚ.ಮಂಡಳಿ ಮಂಡ್ಯ ಇವರಿಗೆ ಪಾವತಿಸಿರುವ ಮೊತ್ತದ ಚಲನ್ ಪ್ರತಿಗಳು.
5. ವಿದ್ಯುತ್ ಕಂಬಗಳು - 502.
6. ಲೈಟ್ ಫಿಟ್ಟಿಂಗ್ಸ್ - 56.
7. ಜಿ.ಐ ಲೈಟ್ ಕಂಬಗಳು - 116.
8. ಟ್ರ್ಯಾನ್ಸ್‌ಫಾರ್ಮೆರ್ಸ್ - 19.

ಹಸ್ತಾಂತರಿಸಿದ ಅಧಿಕಾರಿಯ
ಹೆಸರು ಮತ್ತು ಸಹಿ

H.B. Somashekar

(ಎಂ.ಬಿ.ಸೋಮಶೇಖರ್)
ಸಹಾಯಕ ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ,
ಜಿಲ್ಲಾ ಯೋಜನಾ ಕಛೇರಿ, ಮಂಡ್ಯ.

ಹಸ್ತಾಂತರಿಸಿಕೊಂಡ ಅಧಿಕಾರಿಯ
ಹೆಸರು ಮತ್ತು ಸಹಿ

ಪೌರಾಯುಕ್ತರು,
ನಗರ ಸಭೆ,
ಮಂಡ್ಯ.

ಪೌರಾಯುಕ್ತರು
ನಗರಸಭೆ, ಮಂಡ್ಯ.

Scanned by CamScanner